- ದೇಶದ ಒಟ್ಟು ಅಂಗವಿಕಲರ ಪೈಕಿ ಶೇ. 36.34ರಷ್ಟು ಜನ ಉದ್ಯೋಗದಲ್ಲಿದ್ದಾರೆ.
- ಒಟ್ಟು ಅಂಗವಿಕಲರಲ್ಲಿ ಶೇ. 9ರಷ್ಟು ಜನ ಪದವಿ ಶಿಕ್ಷಣ ಪಡೆದಿದ್ದಾರೆ. ಇವರಲ್ಲಿ ಹೆಚ್ಚಿನ ಜನ ಚಂಡೀಗಢ ಮತ್ತು ದೆಹಲಿ ರಾಜ್ಯಗಳಿಗೆ ಸೇರಿದವರು.

ಪ್ರಜ್ಞೆಯು ಭಾಗಶಃ ಅಥವಾ ಸಂಪೂರ್ಣವಾಗಿ ಇಲ್ಲದಿರುವುದನ್ನು ಸೂಚಿಸುತ್ತದೆ. ಅಪಘಾತ ಇಲ್ಲವೇ ಆನುವಂಶಿಕವಾಗಿ ಕುರುಡುತನ ಉಂಟಾಗಿರುವ ದೃಷ್ಟಿಹೀನತೆಯನ್ನು ಕೆಲವು ಸಂದರ್ಭಗಳಲ್ಲಿ ಸರಿಪಡಿಸಬಹುದಾದ ಅವಕಾಶ ಮತ್ತು ಸಾಧ್ಯತೆಗಳಿರುತ್ತವೆ.

### 3. ಸೆರೆಬ್ರಲ್ ಪಾಲ್ಸಿ (ಮೆದುಳಿನ ಪಾರ್ಶ್ವವಾಯು)

ಶಿಶು ಜನನದ ಸಮಯದಲ್ಲಿ ಅಥವಾ ಮುಂಚಿತವಾಗಿ ಸಾಮಾನ್ಯವಾಗಿ ಕಂಡುಬರುವ ಈ ವೈಕಲ್ಯವು ದೇಹದ ಅಂಗಾಂಗಗಳ ಮುಕ್ತ ಚಲನೆಯನ್ನು ತಡೆಹಿಡಿಯುತ್ತದೆ. ಚಲನೆಯನ್ನು ನಿಯಂತ್ರಿಸುವ ಮೆದುಳಿನ ಭಾಗಗಳ ಅಸಮರ್ಪಕ ಬೆಳವಣಿಗೆ ಅಥವಾ ಅಪಘಾತಗಳಿಂದ ಇದು ಉಂಟಾಗುತ್ತದೆ. ಸ್ನಾಯುಗಳು, ಭಂಗಿ ಮತ್ತು ಅಂಗಾಂಗ ಚಲನೆಯ ಸಮನ್ವಯದ ಮೇಲೆ ಭಾರೀ ಪರಿಣಾಮ ಬೀರುವ ಈ ವೈಕಲ್ಯಕ್ಕೆ ಯಾವುದೇ ಚಿಕಿತ್ಸೆ ಇಲ್ಲ. ಈ ಸಮಸ್ಯೆಗೆ ತುತ್ತಾದ ವ್ಯಕ್ತಿಯು ಇದನ್ನು ಜೀವನಪೂರ್ತಿ ಅನುಭವಿಸುತ್ತಾನೆ. ಅಂಗಾಂಗ ಚಲನೆಯನ್ನು ಸುಧಾರಿಸುವ ಮತ್ತು ಜೀವನದ ಗುಣಮಟ್ಟ ಹೆಚ್ಚಿಸಬಹುದಾದ ಚಿಕಿತ್ಸೆಗಳಿವೆ. ವಯಸ್ಸು ಏರಿದಂತೆ ವೈಕಲ್ಯತೆಯ ಪ್ರಮಾಣ ಹೆಚ್ಚುವುದಿಲ್ಲ. ಇದು ಹುಟ್ಟಿನಿಂದಲೇ ಬರುವಂಥದ್ದು. ಅಸಮರ್ಪಕ ಮೆದುಳಿನ ಬೆಳವಣಿಗೆಯಿಂದ ತಲೆದೋರುವ ಈ ವೈಕಲ್ಯವು ತಾಯಿಯ ಗರ್ಭದಲ್ಲಿ ಇರುವಾಗಲೇ ಶುರುವಾಗುತ್ತದೆ. ಸೆರೆಬ್ರಲ್ ಪಾಲ್ಸಿ ಕಾಯಿಲೆಯು 500 ಮಕ್ಕಳಲ್ಲಿ ಒಂದು ಮಗುವಿಗೆ ಬರುತ್ತದೆ.

### 4. ಸೆಂಟ್ರಲ್ ಆಡಿಟರಿ ಪ್ರೋಸೆಸಿಂಗ್ ಡಿಸಾರ್ಡರ್ (ಸಿಎಪಿಡಿ)

ಇದು ಕಿವಿಗಳಿಗೆ ಸಂಬಂಧಿಸಿದ ಅಂಗವೈಕಲ್ಯವಾಗಿದ್ದು, ಕಿವಿಗಳು ಸ್ವೀಕರಿಸಿದ ಶಬ್ದಕ್ಕೆ ಪ್ರತಿಕ್ರಿಯೆ ನೀಡಲು ಮೆದುಳಿಗೆ ಸಾಧ್ಯವಾಗುವುದಿಲ್ಲ. ಇದರಿಂದ ವ್ಯಕ್ತಿಯು ಕಿವುಡುತನದಿಂದ ಬಳಲುತ್ತಾನೆ. ಈ ಸ್ಥಿತಿಯಿಂದಾಗಿ ಕೆಲಸ ನಡೆಯುವ ಜಾಗದಲ್ಲಿ, ಸಂತೆ ಬೀದಿಗಳಲ್ಲಿ, ರಸ್ತೆಗಳ ಅಕ್ಕಪಕ್ಕದ ಗದ್ದಲದ ಶಬ್ದಗಳು ಸರಿಯಾಗಿ ಕೇಳಿಸದೆ ಇರುವುದರಿಂದ ವ್ಯಕ್ತಿಯು ತೀವ್ರ ಅನನುಕೂಲ ಅನುಭವಿಸುತ್ತಾನೆ. ಮೆದುಳು ಮತ್ತು ಕಿವಿಗಳ ನಡುವಿನ ಹೊಂದಾಣಿಕೆಯ ಕೊರತೆಯಿಂದ ವ್ಯಕ್ತಿಗೆ ಇತರರ ಮಾತುಗಳು ಅರ್ಥವಾಗುವುದಿಲ್ಲ. ಇದು ಕೇಂದ್ರ ನರಮಂಡಲದ ಶ್ರವಣ ವ್ಯವಸ್ಥೆಯ ದೋಷ. ಚಿಕ್ಕ ಮಕ್ಕಳಲ್ಲಿ ಇದರಿಂದ ಡಿಸ್ಲೆಕ್ಸಿಯಾ ಕೂಡ ತಲೆದೋರಬಹುದು ಎನ್ನುತ್ತಾರೆ ತಜ್ಞ ವೈದ್ಯರು.

### 5. ಡೌನ್ ಸಿಂಡ್ರೋಮ್

ಇದೊಂದು ಆನುವಂಶಿಕ ವೈಕಲ್ಯವೆನಿಸಿದ್ದು, ವ್ಯಕ್ತಿಯು ಹೆಚ್ಚುವರಿ ವರ್ಣತಂತುವಿನೊಂದಿಗೆ ಜನಿಸಿರುತ್ತಾನೆ. ಇದರಿಂದ ಮಾನಸಿಕ ಹಾಗೂ ದೈಹಿಕ ಬೆಳವಣಿಗೆ, ಎರಡರಲ್ಲೂ ವ್ಯತ್ಯಾಸಗಳಾಗಿರುತ್ತವೆ. ಡೌನ್ ಸಿಂಡ್ರೋಮ್‌ನಿಂದ ಬಳಲುವ ಮಕ್ಕಳು ಸಮತಟ್ಟಾದ ನೆತ್ತಿ, ಬಾದಾಮಿ ಬೀಜದ ಆಕಾರದ ಕಣ್ಣುಗಳು, ಸಣ್ಣ ಕಿವಿ, ಸಣ್ಣ ಕತ್ತು ಮತ್ತು ಯಾವಾಗಲೂ ಬಾಯಿಯಿಂದ ಹೊರಚಾಚಿದ ನಾಲಿಗೆ, ಸಣ್ಣ ಕೈಕಾಲುಗಳು ಮತ್ತು ಹೃದಯದ ತೊಂದರೆಗಳಿಗೆ ಒಳಗಾಗುತ್ತಾರೆ. ಕುಂಠಿತ ಬೆಳವಣಿಗೆ ಮತ್ತು ನಡವಳಿಕೆ ಸಮಸ್ಯೆಗಳು ಕಂಡುಬರುತ್ತವೆ. ವಿಪರೀತ ಹಟ ಮಾಡುವುದು, ತುಂಟತನ, ಅಸ್ಪಷ್ಟವಾಗಿ ಮಾತನಾಡುವುದು, ಅತಿಯಾಗಿ ಸಿಟ್ಟುಮಾಡಿಕೊಳ್ಳುವುದು ಮುಂತಾದ ಲಕ್ಷಣಗಳು ಸಾಮಾನ್ಯವಾಗಿ ಕಂಡುಬರುತ್ತವೆ. ವಯಸ್ಸು ಕಳೆದಂತೆ ಯೋಚಿಸುವ ಶಕ್ತಿಯನ್ನು ಕಳೆದುಕೊಳ್ಳುವ ಈ ವಿಕಲಾಂಗರು 50ನೇ ವಯಸ್ಸಿನ ವೇಳೆಗೆ ಅಲ್ಜೈಮರ್ ಕಾಯಿಲೆಗೆ ತುತ್ತಾಗುವ ಸಾಧ್ಯತೆಗಳಿವೆ ಎನ್ನುತ್ತಾರೆ ವೈದ್ಯರು. ವಯಸ್ಕರಲ್ಲಿ ನೆನಪಿನ ಶಕ್ತಿಯು ಕ್ರಮೇಣವಾಗಿ ಕುಂದುವುದರಿಂದ, ನಿರ್ಧರಿಸುವ ಮತ್ತು ಕೆಲಸ ಮಾಡುವ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಇತರರ ಸಹಾಯದಿಂದ ಸಹಜ ಬದುಕನ್ನು ನಡೆಸುವವರು ಇದ್ದಾರೆ. ಅಮೆರಿಕ ದೇಶದಲ್ಲಿ ಪ್ರತಿ ವರ್ಷ 5700ಕ್ಕೂ ಹೆಚ್ಚು ಡೌನ್ ಸಿಂಡ್ರೋಮ್‌ನಿಂದ ಬಳಲುವ ಶಿಶುಗಳು ಜನಿಸುತ್ತವೆ. ಇದಕ್ಕೆ ಚಿಕಿತ್ಸೆ ಇದೆ.

### 6. ಭ್ರೂಣದ ಆಲ್ಕೋಹಾಲ್ ಸ್ಪೆಕ್ಟ್ರಮ್ ಡಿಸಾರ್ಡರ್

ಮಹಿಳೆಯರು ಗರ್ಭಧಾರಣೆಯ ಅವಧಿಯಲ್ಲಿ ಮದ್ಯಪಾನ ಮಾಡುವುದರಿಂದ ಜನಿಸುವ ಶಿಶುವಿನಲ್ಲಿ ಅಂಗವೈಕಲ್ಯ ತಲೆದೋರುತ್ತದೆ. ಗರ್ಭಿಣಿಯು ನಿರಂತರವಾಗಿ ಮದ್ಯಪಾನ ಮಾಡಿದರೆ ಶಿಶುವಿನ ನರವ್ಯೂಹ ಬೆಳವಣಿಗೆಯಲ್ಲಿ ವ್ಯತ್ಯಾಸವಾಗುತ್ತದೆ. ಇದರಿಂದ ಮೆದುಳಿನ ಬೆಳವಣಿಗೆಯು ಕುಂಠಿತವಾಗುತ್ತದೆ. ಕೆಲವು ಶಿಶುಗಳು ಹುಟ್ಟುವ ಮೊದಲೇ ಗರ್ಭಾವಸ್ಥೆಯಲ್ಲಿಯೇ ಸಾವನ್ನಪ್ಪುತ್ತವೆ. ಜೀವಿತಾವಧಿಯಲ್ಲಿ ಕಡಿತ, ಬೆಳವಣಿಗೆಯಲ್ಲಿ ವಿಳಂಬ, ಬೌದ್ಧಿಕ ದುರ್ಬಲತೆ, ದೈಹಿಕ ಅಸಹಜತೆ, ಕಲಿಕೆಯ ಸಮಸ್ಯೆಗಳು ಮತ್ತು ನಡವಳಿಕೆಯ ಸವಾಲುಗಳು ಜೀವಿಸಿದಷ್ಟು ದಿನವೂ ಕಾಡುತ್ತವೆ. ಇದಕ್ಕೆ ಚಿಕಿತ್ಸೆ ಇಲ್ಲ.



ದೇಹದ ದೌರ್ಬಲ್ಯ ನಿರ್ಲಕ್ಷಿಸಿ ಕಾಯಿಪಲ್ಲೆ ಮಾರಿ ಬದುಕಿನ ಜಟಕಾಬಂಡಿ ಚಾಲನೆಯಲ್ಲಿರುವ ಸವದತ್ತಿಯ ರೈತ ಹುಸೇನಿ

- ಶಾಲೆ ಮತ್ತು ಕಾಲೇಜುಗಳಲ್ಲಿ ಕಲಿಯುತ್ತಿರುವ 5ರಿಂದ 19ರ ವಯೋಮಾನದ ಅಂಗವಿಕಲ ಮಕ್ಕಳ ದೊಡ್ಡ ಸಂಖ್ಯೆ ಗೋವಾ ಮತ್ತು ಕೇರಳ ರಾಜ್ಯಗಳಲ್ಲಿದೆ.
- ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯು ಶೇ. 4.94 ಜನ ಅಂಗವಿಕಲರಾಗಿದ್ದಾರೆ.